ಕೆ.ಜಿ.ಎಫ್.ನಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವನ್ನು ಅಭಿವೃದ್ಧಿಗೊಳಿಸುವುದು

107(1325) ಶ್ರೀ ಭಕ್ತವತ್ಸಲಂ.ಎಂ. (ಕೆ.ಜಿ.ಎಫ್.) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್.ನಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣವನ್ನು ಪ್ರಯಾಣಿಕರಿಗಾಗಿ ಉತ್ತಮಗೊಳಿಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳುತ್ತಿದೆಯೇ;

ಆ) ಹಾಗಿಲ್ಲದಿದ್ದಲ್ಲಿ ಕೆ.ಜಿ.ಎಫ್. ಬಸ್ ನಿಲ್ದಾಣವನ್ನು ಉತ್ತಮಗೊಳಿಸಲು ಬೇಕಾಗುವ ಕಾಲಾವಧಿ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು

ಆ) ನೂತನ ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಪ್ರಸಕ್ತ ಸಾಲಿ ಆಯವ್ಯಯದಲ್ಲಿ ರೂ. 30.00 ಲಕ್ಷಗಳನ್ನು ಅಳವಡಿಸಲಾಗಿದೆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಶೀಘ್ರದಲ್ಲಿ ಕೆಲಸವನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.

ಶ್ರೀ ಎಂ.ಭಕ್ತವತ್ಸಲಂ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರದಲ್ಲಿ ಕೆ.ಜಿ.ಎಫ್.ನಲ್ಲಿ ಹೊಸ ಬಸ್‌ಸ್ಟ್ಯಾಂಡ್ ಓಪನ್ ಆಗಿರುವುದು. ಕೇವಲ ಖಾಲಿ ಗ್ರೌಂಡ್‌ನಲ್ಲಿ ಈ ಬಸ್‌ಸ್ಟ್ಯಾಂಡ್ ಇದ್ದು ಆದರೆ ಅಲ್ಲಿ ಲೆಟ್ರಿನ್, ನೀರಿನ ಪೂರೈಕೆ, ಕ್ಯಾಂಟೀನ್ ದೂರವಾಣಿ ಸಂಪರ್ಕದ ವ್ಯವಸ್ಥೆ ಮತ್ತು ದೀಪದ ವ್ಯವಸ್ಥೆಗಳ್ಯಾವುವು ಇಲ್ಲ. ಆರು ಗಂಟೆಯ ಮೇಲಂತೂ ಹೆಂಗಸರ್ಯಾರು ಅಲ್ಲಿಗೆ ಹೋಗುವುದೇ ಇಲ್ಲ. ಈ ಕಾರಣದಿಂದ ಕಲೆಕ್ಷನ್ ಕೂಡ ಈಗ ಅರ್ಧಕ್ಕೆ ಬಂದಿದೆ. ಜನರೇ ಅಲ್ಲಿಗೇ ಆರು ಗಂಟೆಯ ನಂತರ ಹೋಗದಿರುವುದು ಕೂಡ ಇದಕ್ಕೆ ಕಾರಣವಾಗಿದೆ. ಮುಖ್ಯವಾಗಿ ಜನರಿಗೆ ಬೇಕಾದ ಸೇಫ್ಟಿಯೇ ಅಲ್ಲಿ ಇಲ್ಲ. ಆರು ಗಂಟೆಯ ನಂತರ, ಅಲ್ಲೆ ಲೇಡೀಸ್ ಹಾಗೂ ಜೆಂಟ್ಸ್ ಹೋಗುವುದು ಸೇಫ್ಟಿ ಅಲ್ಲ. ನೂತನ ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಹಾಗೂ ಮೂವತ್ತು ಲಕ್ಷ ರೂಪಾಯಿ ದುಡ್ಡು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಕೆಲಸವನ್ನು ಯಾವತ್ತು ಮಾಡುತ್ತಾರೆಂದು ನಮಗೆ ಮಾನ್ಯ ಸಚಿವರು ಅಶ್ಯೂರೆನ್ಸ್ ಕೊಟ್ಟರೆ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾವು ತಕ್ಷಣ ಕೆಲಸ ಪ್ರಾರಂಭ ಮಾಡಿ ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಬಸ್ ನಿಲ್ದಾಣದಲ್ಲೆ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿಯಿತು. ಲಿಖಿತ ಮೂಲಕ ಉತ್ತರ.

(ಅ) ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರ

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 9ನೇ ಮಾರ್ಚ್ 2001, ಎಂಟನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 145 ಪ್ರಶ್ನೆಗಳ ಪೈಕಿ 110 ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.